ವರ್ಷದ ಒಂದೆ ಸಂಕುಸ್ಥಾಪನೆ ಆದಾಗ—ಮಾನ್ಯ ಕರ್ನಾಟಕ ರಾಜ್ಯದ ಹೈಕೋರ್ಟಿನ ಮುಖ್ಯ ನ್ಯಾಯಾಧಿ ಶರಾದ ಪಾಳಿಪಾತ್ ಸಾಹೆಬರವರು ಫಂಕ್ಷನ್‌ನಲ್ಲಿ ಹಾಜರಿದ್ದಾಗ, ಲೋಕೋಪ ಯೋಗಿ ಇಲಾಖೆಯ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರು ಒಂದು ವರ್ಷದೊಳಗಾಗಿ ಈ ಕೆಲಸ ವನ್ನು ಮುಗಿಸುತ್ತೇವೆ ಎಂದು ಹೇಳಿದ್ದರು. ಅದು ಇನ್ನೂ ಆಗಿಲ್ಲ. ಇಷ್ಟು ವಿಳಂಬವಾಗುವುದಕ್ಕೆ ಕಾರಣಗಳು ಏನು ಎಂದು ದಯಮಾಡಿ ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಇದರಲ್ಲಿ ಟೆಕ್ನಿಕಲ್ ಸ್ಯಾಕ್ಷನ್ ಆಗುವಲ್ಲಿ ಸ್ವಲ್ಪ ತಡವಾಗಿದೆ. ಆದಷ್ಟು ಬೇಗ ಮುಗಿಸುತ್ತೇವೆಂದು ಈಗಾಗಲೇ ಹೇಳಿದ್ದೇನೆ. ಈ ವಿಷಯದಲ್ಲಿ ಮಾನ್ಯ ಸದಸ್ಯರು ಸಂತೋಷಪಡಬೇಕು. ಯಾಕೆಂದರೆ ೧೯೮೪ರಲ್ಲಿ ಆಸ್ತಿಭಾರ ಹಾಕಿರುವ ಕೋರ್ಟ್ ಕಟ್ಟಡಕ್ಕೆ ೧೯೮೫ ರಲ್ಲಿ ಕಟ್ಟಡ ತೆಗೆದುಕೊಳ್ಳಲಿಕ್ಕೆ ಆಯಿತು ಎಂದು ನನಗೆ ಸಂತೋಷವಾಗಿದೆ. ಕೆಲವು ಕಡೆ ಆಸ್ತಿಭಾರ ಹಾಕಿ ೫–೧೦ ವರ್ಷಗಳಾದರೂ ಕಟ್ಟಡ ಅಪೂರ್ಣವಾಗಿ ಇದ್ದಲ್ಲಿಯೇ ಇರುತ್ತದೆ. ಆದಷ್ಟು ಬೇಗ ಕೆಲಸವನ್ನು ಮುಗಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ ಪಾಟೀಲ.—ಈ ಕಟ್ಟಡ ಕಟ್ಟುವಂತಹ ಜಾಗದ ಭಾಗದಲ್ಲಿ ಶ್ರೀ ಚಿದಂಬರೇಶ್ವರ ದೇವಸ್ಥಾನ ಇದೆ. ಕಟ್ಟಡ ಕಟ್ಟುವಂತಹ ಜಾಗಕ್ಕಾಗಿ ವ್ಯಾಜ್ಯವೂ ಇದೆ ಎಂದು ಕಂಡುಬಂದಿದೆ. ಇದಕ್ಕಾಗಿ ವಿಳಂಬವಾಗಿದೆ ಎಂದು ನನ್ನ ಗಮನಕ್ಕೆ ಬಂದಿದೆ, ಇದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ ಈ ಕಾರ್ಯಕ್ರಮ ವನ್ನು ಮುಂದುವರಿಸುತ್ತೇವೆ. ಟೆಂಡರ್ ಕರೆದಿದ್ದಾರೆ ಎಂಬ ಮಾತನ್ನು ಹೇಳುತ್ತೇನೆ.

ಮಾನ್ವಿ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜಿನ ಬಗ್ಗೆ

೨೫೪ (೭೦೫) ಶ್ರೀ ಬಸವರಾಜ ಪಾಟೀಲ್ ಅನ್ವರಿ (ಮಾನ್ವಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಸಚಿವರು ದಯವಿಟ್ಟು ಉತ್ತರಿಸುವರೆ :—

ಅ) ಮಾನ್ವಿ ನಗರದಲ್ಲಿ ಕುಡಿಯುವ ನೀರಿನ ತೊಂದರೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ತೊಂದರೆಯನ್ನು ನೀಗಲು ತುಂಗಭದ್ರಾ ನದಿಯಿಂದ ನೀರು ಸರಬರಾಜಿಗಾಗಿ ಯೋಜನೆಯನ್ನು ಏನಾದರೂ ಸರ್ಕಾರವು ಹಾಕಿಕೊಂಡಿದೆಯೇ ?

ಇ) ಹಾಗಿದ್ದಲ್ಲಿ ನೀರಿನ ಯೋಜನೆಯು ಈಗ ಯಾವ ಹಂತದಲ್ಲಿದೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಸವರಾಜ್ ಪಾಟೀಲ್.—ಮಾನ್ಯ ಮಂತ್ರಿಗಳವರ ಉತ್ತರದಲ್ಲಿ ಏನು ಕಾಣುತ್ತದೆ ಅಂದರೆ ಒಂದು ಜಾಮೀನು ಪತ್ರ ಬರೆಸಿಕೊಳ್ಳುವ ಕಾಲದಲ್ಲಿ ಹಳ್ಳಿಯೊಳಗಿನ ಒಂದು ನೆನಪು ಬರುತ್ತದೆ. ಬರೆಸಿಕೊಳ್ಳುವಾಗ ''ಅವರು ಕೊಡದೇ ಹೋದರೆ ನಾನು ಕೊಡುತ್ತೇನೆಂದು ಬರೆದು ಕೊಟ್ಟು, ಓದುವಾಗ ''ಅವನು ಕೊಡದೇ ಹೋದರೆ ನಾನು ಏನು ಕೊಡುತ್ತೇನೆ'' ಎಂದು ಹೇಳಿ ಓದುತ್ತಿದ್ದರು. ಹಾಗಿದೆ ಇವರ ಉತ್ತರ. ಮಾನವಿ ನಗರದ್ದು ಕುಡಿಯುವ ನೀರಿನ ತೊಂದರೆ ಇದೆ ಎಂದು ಸರಕಾರದ ಗಮನಕ್ಕೆ ಬಂದಿದೆ ಎಂದು ಒಪ್ಪಿಕೊಳ್ಳುತ್ತಾರೆ. ಎರಡನೆಯದಕ್ಕೆ ಇಲ್ಲ ಎಂದು ಹೇಳುತ್ತಾರೆ. ಮೂರನೆಯದಕ್ಕೆ ಉದ್ಭವಿಸುವುದಿಲ್ಲ ಎಂದು ಹೇಳುತ್ತಾರೆ. ನಾನು ಹೇಳುವು ದೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಈಗಾಗಲೇ ನೀವು ಕುಡಿಯುವ ನೀರಿನ ಸಲುವಾಗಿ ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದೀರಿ. ಆದರೆ ನಗರದಲ್ಲಿ ಕುಡಿಯುವ ನೀರಿನ ಬಗ್ಗೆ ಯೋಜನೆಗಳು ಇಲ್ಲ ಎಂದರೆ ಹೇಗೆ ? ೧೯೭೧-೭೨ ರಲ್ಲಿ ತುಂಗಭದ್ರಾ ನದಿಯಿಂದ ಮಾನವಿ ತಾಲ್ಲೂಕಿಗೆ ಕುಡಿಯುವ

ನೀರಿನ ಯೋಜನೆಯನ್ನು ಈಗಾಗಲೇ ತಯಾರು ಮಾಡಿದ್ದರೂ ಆದರಲ್ಲಿ ನಂದಿಹಾಳ ಮತ್ತು ತುಂಗಭದ್ರ ಯೋಜನೆಗಳಿದ್ದವು. ಈಗ ನಂದಿಹಾಳ ಯೋಜನೆಯನ್ನು ಕಾರ್ಯರೂಪದಲ್ಲಿ ತೆಗೆದು ಕೊಂಡಿದ್ದೀರಿ. ಆ ಕಾಲಕ್ಕೆ ಜನಸಂಖ್ಯೆ ಆಧಾರದ ಮೇಲೆ ತೆಗೆದುಕೊಂಡಿರಬಹುದು. ಕಡಿಮೆ ಜನ ಸಂಖ್ಯೆ ಆದಕ್ಕೆ ಕಾರಣ ಇರಬಹುದು. ಆದರೆ ಈಗ ಪಾನವಿ ತಾಲ್ಲೂಕಿನಲ್ಲಿ ಕನಿಷ್ಟ ೪೦-೪೫ ಸಾವಿರ ಜನಸಂಖ್ಯೆ ಆಗುತ್ತಾ ಇದೆ. ಆದುದರಿಂದ ಈಗಲಾದರೂ ತಾವು ಅದನ್ನು ಕಾರ್ಯರೂಪಕ್ಕೆ ಪ್ರಯತ್ನ ಮಾಡುತ್ತೀರಾ ? ಎಂಬುದನ್ನು ದಯವಿಟ್ಟು ತಿಳಿಸಿ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ವಿಯ ಜನಸಂಖ್ಯೆ ೧೯೮೧ರ ಜನ ಗಣತಿಯ ಪ್ರಕಾರ ೨೧,೩೪೫. ಆದರೆ ಸನ್ಮಾನ್ಯ ಸದಸ್ಯರು ಬಹಳ ಜಾಸ್ತಿ ಜನಸಂಖ್ಯೆಯನ್ನು ಹೇಳಿದ್ದಾರೆ. ಈಗಿನ ನೀರು ಸರಬರಾಜಿನ ಒಟ್ಟು ಪ್ರಮಾಣ ೨ ಲಕ್ಷದ ೬೦ ಸಾವಿರ ಗ್ಯಾಲನ್‌ಗಳು. ಅಲ್ಲಿ ದೋಷ ಏನಿದೆ ಎಂದರೆ ಅಲ್ಲಿ ಜಲಸಂಗ್ರಹಾಗಾರಗಳು ಇಲ್ಲ. ಕೊಳವೆಗಳ ಮುಖಾಂತರ ನೀರನ್ನು ತೆಗೆದುಕೊಳ್ಳತಕ್ಕ ಭವ್ಯತೆ ಅನುಕೂಲವಾಗಿಲ್ಲ. ಅದನ್ನು ಸರಿಪಡಿಸುವುದಕ್ಕೆ ಕಾರ್ಯಕ್ರಮ ತೆಗೆದು ಕೊಳ್ಳುತ್ತೇನೆ ಎನ್ನುವ ಮಾತನ್ನು ಅವರಿಗೆ ಹೇಳಿದ್ದೇನೆ. ತುಂಗಭದ್ರಾದಿಂದ ನೀರನ್ನು ತೆಗೆದು ಕೊಂಡು ಬರುವುದಕ್ಕೆ ಹಣ ಜಾಸ್ತಿ ಖರ್ಚಾಗುವುದರಿಂದ, ಸಧ್ಯಕ್ಕೆ ಅದು ಆಗುವುದಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಸವರಾಜ್ ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಂದಿಹಳ್ಳಕ್ಕೆ ೧೫-೨೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ, ಉಸುಕಿನ ಚೀಲವನ್ನು ಅಡ್ಡಕಟ್ಟಿ ನೀರನ್ನು ಸ್ಟಾಕ್ ಮಾಡ ತಕ್ಕದ್ದು, ಸರಕಾರದ ಗಮನಕ್ಕೆ ಬಂದಿದೆ. ಪ್ರತಿವರ್ಷವೂ ಟ್ಯಾಕ್ಟರ್‌ಗಳ ಮೂಲಕ, ಇನ್ನು ಯಾವು ದಾದರೂ ಸಾರಿಗೆ ವ್ಯವಸ್ಥೆ ಮೂಲಕ ನೀರನ್ನು ಸರಬರಾಜು ಮಾಡುವ ವ್ಯವಸ್ಥೆ ಸರಕಾರದ ಗಮನಕ್ಕೆ ಬಂದಿದೆ. ಹೀಗಿದ್ದರೂ ಕೂಡಾ ಆದೇ ಯೋಜನೆಯಿಂದ ನೀರನ್ನು ಪೂರೈಸುವ ಯೋಜನೆ ಸರಕಾರಕ್ಕೆ ಏಕಿದೆ ? ಮಾನ್ವಿನಗರಕ್ಕೆ ಪ್ರತಿವರ್ಷ ಬರತಕ್ಕ ಜನಸಂಖ್ಯೆಜಾಸ್ತಿ, ಮಾನ್ವಿ ತಾಲ್ಲೂಕ್ ನೀರಾವರಿ ಪ್ರದೇಶ ಆಗಿರುವುದರಿಂದ ಪ್ರತಿವರ್ಷ ೫ ಸಾವಿರ, ೧೦ ಸಾವಿರ ಜನಸಂಖ್ಯೆ ಇಲ್ಲಿಗೆ ವಲಸೆ ಬರುತ್ತಿದೆ. ಈ ಯೋಜನೆ ೧೯೮೦ ರಲ್ಲಿ ಆಯಿತು. ಇಲ್ಲಿಗೆ ೫ ವರ್ಷದಿಂದ ಸುಮಾರು ೨೦ ಸಾವಿರ ಜನಸಂಖ್ಯೆ ಹೆಚ್ಚಾಗಿದೆ. ಆದಕಾರಣ ತುಂಗಭದ್ರಾ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನೋಡೋಣ ಸ್ವಾಮಿ.

ಚಿಕ್ಕಮಗಳೂರು ನಗರಸಭೆಯಲ್ಲಿ ನೀರಿನ ತೆರಿಗೆ ವಿಧಿಸುವ ಬಗ್ಗೆ

೨೫೬(೬೦೧) ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಸಚಿವರು ದಯವಿಟ್ಟು ಉತ್ತರಿಸುವರೆ :—

ಅ) ಚಿಕ್ಕಮಗಳೂರು ಪುರಸಭೆಯವರು ನೀರಿನ ಕರವನ್ನು ಹೆಚ್ಚಿಸಿದ್ದಾರೆಯೆ?

ಆ) ಹಾಗಿದ್ದಲ್ಲಿ ಹೆಚ್ಚಿಸಿದ ಮೊತ್ತವೆಷ್ಟು ಹಾಗೂ ಅದಕ್ಕೆ ಕಾರಣಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್.—(ಮಾನ್ಯ ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಪ್ರಶ್ನೆ ಸಂಖ್ಯೆ ೨೫೫ (೨೬೮) ಸದಸ್ಯರು ಗೈರುಹಾಜರಿ

ಪ್ರಶ್ನೆ ಸಂಖ್ಯೆ ೨೫೬ (೬೦೧) (ಪ್ರಶ್ನೋತ್ತರ ಲಗತ್ತಿಸಲಾಗಿದೆ)

ಶ್ರೀ ಐ. ಬಿ. ಶಂಕರ್.—ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಮಾನ್ಯ ಮಂತ್ರಿಯವರನ್ನು ಕೇಳುತ್ತಿದ್ದೇನೆ. ಚಿಕ್ಕಮಗಳೂರು ಟ್ಯಾಂಕ್ ಕಟ್ಟಬೇಕಾದರೆ ಒಂದು ರೂಪಾಯಿಗೆ ನಾಲ್ಕುಪೈಸೆಯಂತೆ ಹೆಚ್ಚು ಕರ ಹಾಕಿ ವಸೂಲು ಮಾಡುವುದಕ್ಕೆ ಆದೇಶ ಆಗಿತ್ತು. ಆದರೆ ಅಲ್ಲಿಯು ಮುನಿಸಿಪಲ್